ಸಾಕ್ಷಿಯನ್ನು ದಿ: 25.06.2025 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಡಿ.ಡಬ್ಲ್ಯೂ-1

**ಪಾಟೀಸವಾಲುಃ- ವಾದಿಗಳ ಪರ ವಕೀಲರಿಂದ:-**

1. ನಾನು ವಿದ್ಯಾಭ್ಯಾಸ ಮಾಡಿಲ್ಲ. ನಾನು ಮೂಲತಃ ಅಮೃತೇಶ್ವರ ಹಳ್ಳಿಯ ನಿವಾಸಿ. ಪ್ರತಿವಾದಿ ನನಗೆ ಗೊತ್ತು. ನಮ್ಮ ಅಣ್ಣನಾದ ದೊಡ್ಡತಮ್ಮಯ್ಯನ ಹೆಂಡತಿ ಹಾಗೂ ಪ್ರತಿವಾದಿಯ ಹೆಂಡತಿ ಅಕ್ಕತಂಗಿಯರು ಎಂದರೆ ಸರಿ. ಆದ್ದರಿಂದ ಪ್ರತಿವಾದಿ ನನ್ನ ಅಣ್ಣನ ಷಡಕ ಎಂದರೆ ಸರಿ. ವಾದಿ ಹಾಗೂ ಪ್ರತಿವಾದಿ ಅಣ್ಣ ತಮ್ಮಂದಿರು ಎಂದರೆ ಸರಿ. ವಾದಿ ಪ್ರಸ್ತುತ ದಾವೆಯನ್ನು ರಸ್ತೆಯ ವಿಚಾರಕ್ಕೆ ಸಂಬಂಧಿಸಿ ಸಲ್ಲಿಸಿರುತ್ತಾರೆ.
2. ಈ ದಾವೆಯ ಬಗ್ಗೆ ನನಗೆ ಮಾಹಿತಿ ಇಲ್ಲ. ವಾದಿಯು ಪ್ರಸ್ತುತ ದಾವೆಯನ್ನು ಸರ್ವೆ ನಂ.122 ಗೆ ಸಂಬಂಧಿಸಿ ಸಲ್ಲಿಸಿದ್ದಾರೆ. ಸದರಿ ಆಸ್ತಿಯು ವಾದಿಗೆ ತಮ್ಮ ತಂದೆಯಿಂದ ಬಂದಿರುತ್ತದೆ. ಸದರಿ ಆಸ್ತಿಯನ್ನು ವಾದಿಯ ತಂದೆ ಖರೀದಿ ಮಾಡಿದಾಗ ಅದರ ಅಳತೆ ಎಷ್ಟಿತ್ತು ಎಂದು ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ಪ್ರತಿವಾದಿಯು ರಸ್ತೆಗೆ ಸಂಬಂಧಿಸಿ ತಕರಾರು ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತು.
3. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ತಯಾರಿಸಲು ನಾನೇ ಮಾಹಿತಿ ನೀಡಿದ್ದೇನೆ. ವಾದಿಯು ರಸ್ತೆ ಬೇಕೆಂದು ಹೇಳಿದ್ದರಿಂದ ಅದಕ್ಕೆ ಸಂಬಂಧಿಸಿ ನಾನು ಮಾಹಿತಿ ನೀಡಿದ್ದೇನೆ. ವಾದಿ ಮತ್ತು ಪ್ರತಿವಾದಿಯ ನಡುವೆ ಸುಮಾರು 40 ವರ್ಷಗಳ ಹಿಂದೆ ಆಸ್ತಿ ವಿಭಾಗ ಆಗಿದೆ ಎಂದರೆ ಸರಿ. ವಾದಿ ಹಾಗೂ ಪ್ರತಿವಾದಿಯ ನಡುವೆ ಆಸ್ತಿ ವಿಚಾರಕ್ಕೆ ಜಗಳ ಆಗಿ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಾಗಿದೆ ಎಂದರೆ ಸರಿಯಲ್ಲ. ಸದರಿ ಮೊಕದ್ದಮೆಯಲ್ಲಿ ನನ್ನ ಅಣ್ಣ ಸಹ ಆರೋಪಿಯಾಗಿದ್ದ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.
4. ವಾದಿಯ ತಂದೆಯು ದಾವಾ ಆಸ್ತಿಯನ್ನು ಶಾಮಣ್ಣ ಎನ್ನುವವರಿಂದ ಖರೀದಿಸಿದ್ದಾರೆ ಎಂದರೆ ಸರಿ. ಆಗ ಪೂರ್ವಕ್ಕೆ ಹುಚ್ಚೇರೇಗೌಡರ ಮಗ ದೊಡ್ಡೇಗೌಡರ ಆಸ್ತಿ, ಪಶ್ಚಿಮಕ್ಕೆ ನಮ್ಮ ಮನೆ, ಉತ್ತರಕ್ಕೆ ಜವನೇಗೌಡರ ಮನೆ ಹಾಗೂ ದಕ್ಷಿಣಕ್ಕೆ ರಸ್ತೆಯಿತ್ತು ಎಂದರೆ ಸರಿ. ದಾವಾ ಆಸ್ತಿಯಲ್ಲಿ ಒಂದು ಶೆಡ್ ಹಾಗೂ ಖಾಲಿಜಾಗ ಇದೆ ಎಂದರೆ ಸರಿ. ದಾವಾ ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ನಾನು ನೋಡಿಲ್ಲ ಹಾಗೂ ಅವುಗಳ ಬಗ್ಗೆ ಕೇಳಿ ತಿಳಿದುಕೊಂಡಿಲ್ಲ.

5. ದಾವಾ ಆಸ್ತಿಯ ವಿಸ್ತೀರ್ಣದ ಬಗ್ಗೆ ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿಲ್ಲ. ದಾವಾ ಆಸ್ತಿಯ ಅಳತೆಯನ್ನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಅಡಿಗಳಲ್ಲಿ ತಿಳಿಸಿದ್ದೇನೆಂದರೆ ನನಗೆ ಗೊತ್ತಿಲ್ಲ. ಜವನೇಗೌಡರು ದಾವಾ ಆಸ್ತಿಯ ಉತ್ತರಕ್ಕೆ ರಸ್ತೆಗೆ ಜಾಗ ಬಿಟ್ಟಿರುವುದಿಲ್ಲ. ಈಗ ದಾವಾ ಆಸ್ತಿಯ ಉತ್ತರಕ್ಕೆ ಜವನೇಗೌಡರ ಮಗ ರಾಜಣ್ಣ ವಾಸವಾಗಿದ್ದಾರೆಂದರೆ ಸರಿ. ಸದರಿ ರಾಜಣ್ಣರವರ ಮನೆಯ ಉತ್ತರಕ್ಕೆ ರಸ್ತೆಯಿದೆ ಎಂದರೆ ಸರಿ.

6. ದಾವಾ ಆಸ್ತಿಯಲ್ಲಿ ರಸ್ತೆಯನ್ನು ಬಿಟ್ಟಿರುವ ಬಗ್ಗೆ ನನಗೆ ಗೊತ್ತಿಲ್ಲ. ವಾದಿ ಹಾಗೂ ಪ್ರತಿವಾದಿಯ ಮಧ್ಯೆ ಆಸ್ತಿ ವಿಭಾಗವಾದಾಗ ಆಸ್ತಿ ವಿಭಾಗದ ಪ್ರಕಾರ ಪೂರ್ವದ ಕಡೆಯ ಅರ್ಧ ಶೆಡ್ ಹಾಗೂ ಖಾಲಿ ಜಾಗ ವಾದಿಗೆ ಸೇರಿತ್ತು ಹಾಗೂ ಪಶ್ಚಿಮದ ಕಡೆಗೆ ಅರ್ಧ ಶೆಡ್ ಹಾಗೂ ಖಾಲಿ ಜಾಗ ಪ್ರತಿವಾದಿಗೆ ಸೇರಿತ್ತು ಎಂದರೆ ನನಗೆ ಗೊತ್ತಿಲ್ಲ. ಅದರಂತೆ ಪಹಣಿ ಪತ್ರಿಕೆಗಳಲ್ಲಿ ಕಾಣಿಸಲಾಗಿದೆ ಎಂದರೆ ಸರಿಯಲ್ಲ. ಈಗಲೂ ಸಹ ಸದರಿಯವರು ಅವರವರ ಭಾಗದ ಸ್ವಾಧೀನದಲ್ಲಿದ್ದಾರೆಂದರೆ ಸರಿಯಲ್ಲ.

7. ದಾವಾ ಆಸ್ತಿಯ ಪೂರ್ವಕ್ಕೆ ಇರುವ ಗೆಂಡೇಗೌಡರವರ ಹೆಂಡತಿ ಹಾಗೂ ವಾದಿಯ ಹೆಂಡತಿ ಅಕ್ಕತಂಗಿಯರು ಎಂದರೆ ಸರಿ. ಆದ್ದರಿಂದ ವಾದಿಯು ಪೂರ್ವದ ಕಡೆಯ ಭಾಗವನ್ನು ತೆಗೆದುಕೊಂಡಿರುತ್ತಾರೆಂದರೆ ಸರಿಯಲ್ಲ. ಪ್ರತಿವಾದಿಯರು ನಮ್ಮ ಸಂಬಂಧಿಕರಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ